**CC** 779/2020 **CW**-1

**PW**-1

ಸಾಕ್ಷಿಯನ್ನು ದಿಃ **24.01.2024** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಮುಖ್ಯವಿಚಾರಣೆಃ ವಾನ್ಯ ಎ ಪಿ ಪಿ ಅವರಿಂದ</u>

ಸದರಿ ಘಟನಾ ಸಂಬಂಧ ಒಂದು ಸಿ ಡಿ ಯನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ಎಂ ಒ 1 ಎಂದು ಗುರತಿಸಲಾಯಿತು.

ಪಾಟಿ ಸವಾಲುಃ ಶ್ರೀ ಎಸ್ ಆರ್ ಎಸ್ ವಕೀಲರಿಂದ ಆರೋಪಿ ಪರವಾಗಿ

ಘಟನಾ ದಿನಕ್ಕೆ ನಾನು ಕರ್ತವ್ಯಕ್ಕೆ ಬಂದು 15 ದಿನ ಕಳೆದಿತ್ತು. ಆ ಸಮಯಕ್ಕೆ ನಮ್ಮ ಕಛೇರಿಯಲ್ಲಿ 11 ಇ ನಕಾಶೆಗೆ ಸಂಬಂಧ ಹಲವಾರು ಅರ್ಜಿಗಳು ಬಾಕಿಯಿದ್ದವು ಎಂದರೆ ಸರಿ. ಸದರಿ 15 ದಿನಗಳ ಮುನ್ನ ಆರೋಪಿತರು ನಮ್ಮ ಕಛೇರಿಗೆ ಬಂದಿರುವುದಿಲ್ಲ. ಆ ದಿನ ಸುಮಾರು 100-150 ಜನ ಹಾಜರಿದ್ದ ಕಾರಣ ಅವರನ್ನು ಗುರುತಿಸಲು ಆಗುವುದಿಲ್ಲ. ಆರೋಪಿತರ ಹೆಸರು ಮತ್ತು ವಿಳಾಸವನ್ನು ಆ ದಿನ ಹಾಜರಿದ್ದ ಸಾರ್ವಜನಿಕರಿಂದ ಕೇಳಿ ತಿಳಿದುಕೊಂಡಿರುತ್ತೇನೆ. ಆರೋಪಿತರು 11 ಇ ನಕಾಶೆಗೆ ನಮ್ಮ ಇಲಾಖೆಗೆ ಅರ್ಜಿ ಸಲ್ಲಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ದಿನ ಅವಾಚ್ಯ ಶಬ್ದಗಳಿಂದ ಯಾರು ಬೈಯುತ್ತಿದ್ದರು ಎಂದು ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ಗುಂಪಿನಲ್ಲಿದ್ದವರು ನನ್ನನ್ನು ತಳ್ಳಿರುತ್ತಾರೆ, ಯಾರು ಎಂದು ಸ್ಪಷ್ಟವಾಗಿ ಹೇಳಲು ಆಗವುದಿಲ್ಲ. ಆರೋಪಿತರ ವಿರುದ್ದ ನಮ್ಮ ಇಲಾಖೆಯವರು ಈ ಹಿಂದೆ ಯಾವುದೇ ದೂರನ್ನು ನೀಡಿರುವುದಿಲ್ಲ, ಸಾಕ್ಷಿಯು ಸ್ವತಃ ಮುಂದುವರೆದು ಲಿಖಿತವಾಗಿ ಯಾರೂ ದೂರು ನೀಡಿರುವುದಿಲ್ಲ ಮೌಖಿಕವಾಗಿ ನೀಡಿದ್ದರು

ಎನ್ನುತ್ತಾರೆ. ಸದರಿ ಮೌಖಿಕ ದೂರಿನ ಅನ್ವಯ ನಾನು ಯಾವುದೇ ಲಿಖಿತ ದೂರನ್ನು ದಾಖಲಿಸಿರುವುದಿಲ್ಲ. ನಮ್ಮ ಇಲಾಖೆಯವರು ಸಕಾಲದಲ್ಲಿ 11 ಇ ನಕಾಶೆಗಳನ್ನು ಸಾರ್ವಜನಿಕರಿಗೆ ನೀಡುವುದಿಲ್ಲ ಎಂಬ ಬಗ್ಗೆ ಹಲವಾರು ದೂರು ಬಂದಿರುತ್ತದೆ ಎಂದರೆ ಸರಿಯಲ್ಲ. ಆ ದಿನ ನಮ್ಮ ಕಛೇರಿಗೆ ಬಂದು ಗಲಾಟೆ ಮಾಡಿರುತ್ತಾರೆ ಎನ್ನುವುದು ಸುಳ್ಳನಿಂದಕೂಡಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಇಲಾಖೆಯವರು ಸರಿಯಾಗಿ ಕರ್ತವ್ಯವನ್ನು ನಿರ್ವಹಿಸದೇ ಇರುವ ಕಾರಣ ಸಾರ್ವಜನಿಕರು ಅದನ್ನು ಪ್ರಶ್ನೆ ಮಾಡಲಾಗಿ ನಾವು ಸುಳ್ಳು ದೂರು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಮಹಜರ್ ನ್ನು ನಾನು ಮತ್ತು ಪೋಲೀಸರು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಾ ಸಾ 2 ರವರಿಗೆ ಯಾರು ಹಲ್ಲೆ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಆರೋಪಿತರಿಗೆ ತೊಂದರೆ ಮಾಡುವ ಉದ್ದೇಶದಿಂದ ನಾವು ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಹಿ/-

**(ದೀಪು.ಬಿ.ಸಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**